ಶೋಚನೀಯ.

ಇರಲಿ, ಕವಿತೆಯ ಬಗ್ಗೆ ಯಾರೂ ಭವಿಷ್ಯವಾಣಿ ನುಡಿಯಲು ಸಾಧ್ಯವಿಲ್ಲ. ಬರುವ ದಿನಗಳಲ್ಲಿ ಯಾವ ಪ್ರವೃತ್ತಿಗಳು ಬಲಪಡುತ್ತವೊ ಗೊತ್ತಿಲ್ಲ. ಎಲ್ಲಿಯವರೆಗೆ ಕಾವ್ಯ ಸಂಕಟಗಳ ಜೊತೆ ಇರುತ್ತದೊ ಅದಕ್ಕೊಂದು ಭವಿಷ್ಯವಿರುತ್ತದೆ. ಕ್ರೌಂಚ ಪಕ್ಷಿಯ ನೋವಿನ ಜೊತೆಗಿದ್ದುದರಿಂದಲೇ ರಾಮಾಯಣಕ್ಕೆ ಒಂದು ಭವಿಷ್ಯ ಪ್ರಾಪ್ತವಾಯಿತು. ಕವಿತೆ ಎಲ್ಲಾ ಬಗೆಯ ಕೊಲೆಗಡುಕರನ್ನು ಎದುರಿಸಬೇಕು. ಏನಿಲ್ಲವೆಂದರೂ, ಕೊನೆಪಕ್ಷ ಹತಾಶೆಯಿಂದ ಶಾಪವನ್ನಾದರೂ ಕೊಡಬೇಕು. ಕಾವ್ಯ ಕವಿಯ ಅಗತ್ಯ ಮತ್ತು ಸಮಾಜದ ಅಗತ್ಯ ಕೂಡ. ಪಾಬ್ಲೊ ನೆರೂಡಾ ಹೇಳಿರುವಂತೆ ಕವಿತೆ ಮತ್ತು ರೊಟ್ಟಿಯಲ್ಲಿ ಎಲ್ಲರಿಗೂ ಪಾಲಿರಬೇಕು.

◆ **ನಿಮ್ಮ ತಂದೆ ಮಾರ್ಕ್ಸ್‌ವಾದಿ ಆಗಿದ್ದರು. ನೀವು ಕೂಡ ಜೆಪಿ ಚಳವಳಿ, ಲೋಹಿಯಾ ಚಳವಳಿಗಳಲ್ಲಿ ಪಾಲ್ಗೊಂಡವರು. ಈ ಚಳವಳಿ, ಚಿಂತನೆಗಳ ಪ್ರಭಾವವನ್ನು ನಿಮ್ಮ ಕಾವ್ಯ ಹೇಗೆ ಸ್ವೀಕರಿಸಿದೆ?**

ಮಾರ್ಕ್ಸ್‌ವಾದದಿಂದ ನಾನು ಬಹಳಷ್ಟು ಕಲಿತಿರುವೆ. ಈಗಲೂ ನಾನು ನಂಬುವುದೇನೆಂದರೆ, ಮಾರ್ಕ್ಸ್‌ವಾದ ಕೇವಲ ಆರ್ಥಿಕ ದರ್ಶನ ಮಾತ್ರವಲ್ಲ. ಇದು ಮನುಷ್ಯ ಜೀವನವನ್ನು ಸಂಪೂರ್ಣವಾಗಿ ಬದಲಾಯಿಸುವ ಚಿಂತನೆಯಾಗಿದೆ. ಗಾಂಧೀಜಿ ಹೇಳುವಂತೆ, ನೀವು ಯಾವ ಬದಲಾವಣೆಯನ್ನು ಸಮಾಜದಲ್ಲಿ ಮಾಡಬೇಕೆನ್ನುವಿರೊ ಅದರ ಮೊದಲ ಪ್ರಯೋಗ ನಮ್ಮ ವೈಯಕ್ತಿಕ ಜೀವನದಲ್ಲಿಯೇ ಸಂಭವಿಸಬೇಕು. ಮಾರ್ಕ್ಸ್‌ವಾದ ಕೂಡ ಹೀಗೆಯೇ. ತನ್ನನ್ನು ಬದಲಾಯಿಸಿಕೊಳ್ಳದ ಮನುಷ್ಯ ಸಮಾಜವನ್ನು ಬದಲಾಯಿಸಲಾರ. ಈಗ ನೋಡಿ, ಈ ಗಿಡಮರ ನದಿಬೆಟ್ಟ ಇವೆಲ್ಲ ಯಾಕೆ ನಾಶವಾಗುತ್ತಿವೆ? ಇದಕ್ಕೆ ಮುಖ್ಯ ಕಾರಣವೆಂದರೆ, ಬಂಡವಾಳಶಾಹಿಯ ಹಪಾಹಪಿ, ದುರಾಸೆ. ಅನೇಕರು ಮನುಷ್ಯರ ದುರಾಸೆ ಅಂತ ಮಾತನಾಡುತ್ತಾರೆ. ನನಗೆ ಹಾಗನಿಸುವುದಿಲ್ಲ. ಕೇವಲ ಬಂಡವಾಳಶಾಹಿಗಳ ಕೆಟ್ಟ ನಡೆಯಿಂದ ಇದು ಸಂಭವಿಸುತ್ತಿದೆ. ನಾನಾಗಲಿ, ನೀವಾಗಲಿ ಇದನ್ನು ನಾಶ ಮಾಡಿದ್ದೇವೆಯೆ? ಯಾರಿಗೆ ತಿನ್ನಲು ಒಂದು ಹೊತ್ತಿನ ಊಟವಿಲ್ಲವೋ ಅವರು ಇವನ್ನೆಲ್ಲ



> ನಮ್ಮ ಮನಸ್ಸಿನಲ್ಲಿ ಜಾತಿ, ಧರ್ಮ, ವಿದ್ಯೆ, ಹಣ, ಅಧಿಕಾರ, ಅಂತಸ್ತು ಯಾವುದೇ ರೀತಿಯ ಅಹಂಕಾರವಿದ್ದರೂ ಅಲ್ಲಿಗೆ ನಮ್ಮ ಮತ್ತು ಕವಿತೆಯ ನಾಶವಾದಂತೆಯೇ ಸರಿ. ಈ ಅಹಂಕಾರವುಳ್ಳವರನ್ನು ಗಮನಿಸಿ, ಅವರು ಹಿಂಸೆ ದಬ್ಬಾಳಿಕೆಯನ್ನಲ್ಲದೆ ಬೇರೇನೂ ಮಾಡುವುದಿಲ್ಲ.